DECEMBER 06, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಭಾರತರತ್ನ, ಸಂವಿಧಾನ ಶಿಲ್ಪಿ,** ಬಾಬಾಸಾಹೇಬರ, 69ನೇ ಮಹಾ ಪರಿನಿರ್ವಾಣ ದಿನವನ್ನು, ನಾಡಿನಾದ್ಯಂತ ಇಂದು, ಅರ್ಥಪೂರ್ಣ ಕಾರ್ಯಕ್ರಮಗಳ ಮೂಲಕ, ಶ್ರದ್ಧಾ ಸುಮನ ಅರ್ಪಿಸಿ, ಆಚರಿಸಿದ ವರದಿಗಳು ಬಂದಿವೆ. ಭಾರತದ ಅಮರ ಪುತ್ರ, ಸಮಾನತೆ, ಸ್ವಾತಂತ್ರ್ಯ ಹಾಗೂ ಬಂಧುತ್ವದ ಸಿದ್ಧಾಂತಗಳ ಮೂಲಕ, ಸಮತೆಯ ಸಮಾಜ ನಿರ್ಮಾಣದ ಕನಸು ಕಂಡ, ದೃಷ್ಟಾರ, ಬಾಬಾಸಾಹೇಬರ ಸ್ಮೃತಿಗೆ, ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಪ್ರಧಾನಮಂತ್ರಿ ಸೇರಿದಂತೆ, ರಾಜ್ಯಪಾಲರು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಆದಿಯಾಗಿ, ಗಣ್ಯರು, ಪುಷ್ಪ ನಮನ ಸಲ್ಲಿಸಿ, ಅವರ ಕೊಡುಗೆಗಳನ್ನು ಸ್ಮರಿಸಿದ್ದಾರೆ.

<><><>

**ಮಂಡ್ಯ ಜಿಲ್ಲಾಧಿಕಾರಿ ಕಚೇರಿ ಉದ್ಯಾನದ,** ಬಾಬಾಸಾಹೇಬರ ಪ್ರತಿಮೆಗೆ, ಕೇಂದ್ರದ ಬೃಹತ್ ಕೈಗಾರಿಕೆ ಖಾತೆ ಸಚಿವ, ಎಚ್.ಡಿ.ಕುಮಾರಸ್ವಾಮಿ, ಗೌರವ ಅರ್ಪಿಸಿದರು.

<><><>

**ರಾಜ್ಯದ ಸರ್ಕಾರಿ ಶಾಲೆಗಳಲ್ಲಿ,** 1 ರಿಂದ 12ನೇ ತರಗತಿ ಕಲಿಯುವ ಮಕ್ಕಳಿಗೆ, ಮುಂಬರುವ ಶೈಕ್ಷಣಿಕ ವರ್ಷದಿಂದ, ಉಚಿತವಾಗಿ ಪಠ್ಯ ಪುಸ್ತಕ ಹಾಗು ನೋಟ್ ಬುಕ್‌ಗಳನ್ನು ವಿತರಿಸವುದಾಗಿ, ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲೂಕಿನ, ಮೇಲ್ಪಾಲ್ ಗ್ರಾಮದ, ಸರ್ಕಾರಿ ಶಾಲೆಯ, ನೂತನ ಕೊಠಡಿಗಳನ್ನು ಉದ್ಘಾಟಿಸಿ, ಅವರು ಮಾತನಾಡಿದರು.

<><><>

**ಧಾರವಾಡ** ಕೇಂದ್ರೀಯ ವಿದ್ಯಾಲಯ ಹಾಗೂ ನವೋದಯ ವಿದ್ಯಾಲಯಗಳಿಗೆ ಮೂಲಸೌಕರ್ಯ ಒದಗಿಸಿ, ಮೇಲ್ದರ್ಜೆಗೇರಿಸಲು, ಕೇಂದ್ರ ಶಿಕ್ಷಣ ಖಾತೆ ಸಚಿವ ಧರ್ಮೇಂದ್ರ ಪ್ರಧಾನ ಜೊತೆ ಚರ್ಚಿಸಿದ್ದಾಗಿ, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ.

<><><>

**ಗಾಂಧಿ ಗ್ರಾಮ ಪುರಸ್ಕಾರಕ್ಕೆ,** ಗದಗ ಜಿಲ್ಲೆಯ ಏಳು ಗ್ರಾಮ ಪಂಚಾಯಿತಿಗಳು ಭಾಜನವಾಗಿವೆ. ಗದಗ ತಾಲೂಕು, ಅಂತೂರು, ಗಜೇಂದ್ರಗಡ ತಾಲೂಕಿನ ಹಾಲಕೇರಿ, ಲಕ್ಷ್ಮೇಶ್ವರ ತಾಲೂಕಿನ ಅಡರಕಟ್ಟಿ, ಮುಂಡರಗಿ ತಾಲೂಕಿನ ಶಿವಾಜಿನಗರ, ನರಗುಂದ ತಾಲೂಕಿನ ವಾಸನ ಮತ್ತು ರೋಣ ತಾಲೂಕಿನ ಹಿರೇಹಾಳ ಹಾಗೂ ಶಿರಹಟ್ಟಿ ತಾಲೂಕಿನ ಕೊಂಚಿಗೇರಿ ಗ್ರಾಮ ಪಂಚಾಯಿತಿಗಳು, 2024–24ನೇ ಸಾಲಿನ, ಗಾಂಧಿ ಗ್ರಾಮ ಪುರಸ್ಕಾರಕ್ಕೆ ಭಾಜನವಾಗಿವೆ. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಗ್ರಾಮ ಆಡಳಿತವನ್ನು ಅಭಿನಂದಿಸಿದ್ದಾರೆ.

<><><>

**ರೇಲ್ವೆ ಖಾತೆ ರಾಜ್ಯ ಸಚಿವ** ವಿ. ಸೋಮಣ್ಣ, ಇಂದು ಉತ್ತರಕನ್ನಡ ಜಿಲ್ಲೆಯ ಪ್ರವಾಸ ಕೈಗೊಳ್ಳಲಿದ್ದಾರೆ. ಸಂಜೆ 4 ಗಂಟೆಗೆ, ಕಾರವಾರ ರೇಲ್ವೆ ನಿಲ್ದಾಣಕ್ಕೆ ಭೇಟಿ ನೀಡಿ, ಪರಿಶೀಲಿಸಲಿದ್ದಾರೆ.

<><><>

**ಬಳ್ಳಾರಿಯ, ವಿಜಯನಗರ ಶ್ರೀಕೃಷ್ಣದೇವರಾಯ** ವಿಶ್ವವಿದ್ಯಾಲಯದಲ್ಲಿ, ಇಂದಿನಿಂದ ಎರಡು ದಿನಗಳ ಕಾಲ, ಅಂತರ್ ಕಾಲೇಜು ಯುವಜನೋತ್ಸವ ಆಯೋಜಿತವಾಗಿದೆ. ವಿಶ್ವವಿದ್ಯಾಲಯ ವ್ಯಾಪ್ತಿಯ, 30 ಮಹಾವಿದ್ಯಾಲಯಗಳ, 600 ವಿದ್ಯಾರ್ಥಿಗಳು, 26 ಕಲಾ ಪ್ರಕಾರಗಳಲ್ಲಿ, ತಮ್ಮ ಪ್ರತಿಭಾ ಪ್ರದರ್ಶನ ಮಾಡಲಿದ್ದಾರೆ ಎಂದು, ಉಪ ಕುಲಪತಿ ಎಂ.ಮುನಿರಾಜು ತಿಳಿಸಿದ್ದಾರೆ. ಲಂಬಾಣಿ ಕಸೂತಿ ಕಲೆಯ ಖ್ಯಾತ ಕಲಾಗಾರ್ತಿ ರಾಷ್ಟ್ರ, ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಡೂರಿನ ಶಾಂತಿಬಾಯಿ, ಯುವಜನೋತ್ಸವಕ್ಕೆ, ಚಾಲನೆ ನೀಡಿದರು. ಯುವಜನೋತ್ಸವದಲ್ಲಿ ಪಾಲ್ಗೊಂಡಿರುವ, ಸ್ನಾತಕೋತ್ತರ ವಿದ್ಯಾರ್ಥಿಗಳಾದ, ದಕ್ಷಿಣಮೂರ್ತಿ ಹಾಗೂ ಐಶ್ವರ್ಯ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ದಕ್ಷಿಣಾಮೂರ್ತಿ + ಐಶ್ವರ್ಯ ಧ್ವನಿ 35 ಸೆಕೆಂದುಗಳು)**

<><><>

**ಧಾರವಾಡ ಜಿಲ್ಲೆ, ಅಣ್ಣಿಗೇರಿ** ಬಳಿ, ಆರ್ಯರ ಪೂಲ್, ಹಳ್ಳದ ಸೇತುವೆ ಹತ್ತಿರ ಸಂಭವಿಸಿದ, ಭೀಕರ ಕಾರು ಅಪಘಾತದಲ್ಲಿ, ಲೋಕಾಯುಕ್ತ ಇನ್ಸ್‌ಪೆಕ್ಟರ್ ಪಂಚಾಕ್ಷರಯ್ಯ ಸಾಲಿಮಠ, ಸಜೀವವಾಗಿ ದಹನಗೊಂಡ, ದುರ್ಘಟನೆ ಸಂಭವಿಸಿದೆ. ಅವರಿಗೆ 45 ವರ್ಷ ವಯಸ್ಸಾಗಿತ್ತು. 2003ನೇ ತಂಡದ ಪೊಲೀಸ್ ಅಧಿಕಾರಿಯಾಗಿದ್ದ, ಸಾಲಿಮಠ, ಈ ಹಿಂದೆ, ಗದಗ, ಧಾರವಾಡ ಗ್ರಾಮೀಣ, ಹುಬ್ಬಳ್ಳಿ ಉಪನಗರ ಠಾಣೆಗಳಲ್ಲಿ, ಕರ್ತವ್ಯ ನಿರ್ವಹಿಸಿದ್ದರು.

<><><>

**ಶಿವಮೊಗ್ಗ ಜಿಲ್ಲೆ, ಗೃಹ ರಕ್ಷಕ ದಳ**, ಇಂದು ಸಂಜೆ 4 ಗಂಟೆಗೆ, ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ, ಅಖಿಲ ಭಾರತ, ಗೃಹ ರಕ್ಷಕ ದಳ ದಿನಾಚರಣೆಯನ್ನು, ಆಯೋಜಿಸಿದೆ. ಜಿಲ್ಲಾ ಪೊಲೀಸ್ ಅಧೀಕ್ಷಕ ಜಿ.ಕೆ. ಮಿಥುನ್ ಕುಮಾರ ಉದ್ಘಾಟಿಸಲಿದ್ದಾರೆ.

<><><>

**ಧಾರವಾಡದ ಸೃಜನಾ ರಂಗಮಂದಿರದಲ್ಲಿ**, ಇಂದು ಮಧ್ಯಾಹ್ನ 2.30ಕ್ಕೆ, 'ಧಾರವಾಡ ವಿಜ್ಞಾನ ನಾಟಕೋತ್ಸವ-2025' ಆಯೋಜಿತವಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿ ಎ.ಎಂ.ಖಾನ, ನಾಟಕೋತ್ಸವ ಉದ್ಘಾಟಿಸಲಿದ್ದಾರೆ. 8 ಕಾಲೇಜುಗಳ 500 ವಿದ್ಯಾರ್ಥಿಗಳು ಪಾಲ್ಗೊಂಡು, ಎರಡು ನಾಟಕಗಳನ್ನು ಪ್ರದರ್ಶಿಸಲಿದ್ದಾರೆ ಎಂದು, ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ದೇಶಕ ವೀರಣ್ಣ ಬೋಳಿಶೆಟ್ಟಿ, ತಿಳಿಸಿದ್ದಾರೆ.

<><><>

**ಪ್ರೊಫೆಸರ್ ಎಸ್.ಪಿ** ಹಿರೇಮಠ ಯುವ ವಿಜ್ಞಾನಿ ಪ್ರಶಸ್ತಿಗೆ, ಶಿವಮೊಗ್ಗ ಕುವೆಂಪು ವಿಶ್ವವಿದ್ಯಾಲಯದ, ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಕೆ.ಕೆ. ಯೋಗಾನಂದ ಭಾಜನರಾಗಿದ್ದಾರೆ. ಇಂದು ಸಂಜೆ 6 ಗಂಟೆಗೆ, ಧಾರವಾಡದ, ಕರ್ನಾಟಕ ವಿದ್ಯಾವರ್ಧಕ ಸಂಘದ, ರಾ.ಹ ದೇಶಪಾಂಡೆ ಸಭಾಭವನದಲ್ಲಿ, ಗಣ್ಯರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

<><><>

**ರಾಜಸ್ಥಾನದ ಸವಾಯಿ ಮಾನಸಿಂಗ್** ಕ್ರೀಡಾಂಗಣದಲ್ಲಿ, ನಡೆದ ಖೇಲೋ ಇಂಡಿಯಾ ಕ್ರೀಡಾಕೂಟದಲ್ಲಿ, ಅಂತರ್ ವಿಶ್ವವಿದ್ಯಾಲಯಗಳ ಕ್ರೀಡಾಕೂಟದಲ್ಲಿ, ಬೆಂಗಳೂರಿನ, ಜೈನ ವಿಶ್ವವಿದ್ಯಾಲಯ 30 ಚಿನ್ನ, 9 ಬೆಳ್ಳಿ, 11 ಕಂಚಿನ ಪದಕಗಳೊಂದಿಗೆ ಒಟ್ಟು 50 ಪದಕಗಳನ್ನು ಜಯಿಸಿ, ನಾಲ್ಕನೇ ಸ್ಥಾನವನ್ನು ಅಲಂಕರಿಸಿದೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ, 1 ಚಿನ್ನ, 1 ಬೆಳ್ಳಿ ಹಾಗೂ 1 ಕಂಚಿನ ಪದಕದೊಂದಿಗೆ, 42ನೇ ಸ್ಥಾನ ಪಡೆದಿದೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**